ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**315**
ವಿಧಾನ ಪರಿಷತ್ತಿನ ಸದಸ್ಯರ ಹೆಸರು	ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	06-03-2020

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಇಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.</td></tr>
<tr><td>ಆ.</td><td>ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.</td></tr>
<tr><td>ಇ.</td><td>ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರ ನೀಡುತ್ತಿರುವ ಗೌರವಧನ ಎಷ್ಟು; ಗೌರವಧನದ ಜೊತೆಗೆ ಇನ್ನಿತರೆ ಸೌಲಭ್ಯಗಳು ಯಾವುವು;</td><td><table>
<tr><th>ವಿವರ</th><th>ಮಾಸಿಕ ಪಾವತಿಸುತ್ತಿರುವ ಗೌರವಧನ</th></tr>
<tr><td>ಅಂಗನವಾಡಿ ಕಾರ್ಯಕರ್ತೆ</td><td>10000.00</td></tr>
<tr><td>ಮಿನಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ</td><td>6250.00</td></tr>
<tr><td>ಸಹಾಯಕಿಯರು</td><td>5250.00</td></tr>
</table>
ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ದೊರೆಯುವ ಸೌಲಭ್ಯಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.</td></tr>
<tr><td>ಈ.</td><td>ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಕುರಿತು ಸರ್ಕಾರದ ನಿಲುವೇನು;</td><td>ಕೇಂದ್ರ ಸರ್ಕಾರದಿಂದ ದಿನಾಂಕ:01.10.2018 ರಿಂದ ಹಾಗೂ ರಾಜ್ಯ ಸರ್ಕಾರದಿಂದ ದಿನಾಂಕ:01.11.2019 ರಿಂದ ಅನ್ವಯವಾಗುವಂತೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಗೌರವಧನವನ್ನು ಹೆಚ್ಚಿಸಲಾಗಿರುತ್ತದೆ.</td></tr>
</table>

<table>
<tr>
<td>ಉ.</td>
<td>ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನ ಅಂಗನವಾಡಿ ಮತ್ತು ಮಿನಿ ಅಂಗನವಾಡಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಅಂಗನವಾಡಿಗಳಿಗೆ ಸ್ವಂತ ಕಟ್ಟಡವಿರುತ್ತದೆ; ಸ್ವಂತ ಕಟ್ಟಡವಿಲ್ಲದ ಅಂಗನವಾಡಿಗೆ ಹೊಸ ಕಟ್ಟಡಗಳನ್ನು ಕಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>
<table>
<tr><th>ತಾಲ್ಲೂಕು</th><th>ಅಂಗನವಾಡಿ ಸಂಖ್ಯೆ</th><th>ಮಿನಿಅಂಗನವಾಡಿ ಕೇಂದ್ರದ ಸಂಖ್ಯೆ</th><th>ಸ್ವಂತ ಕಟ್ಟಡಗಳ ಸಂಖ್ಯೆ</th></tr>
<tr><td>ಹೊನ್ನಾಳಿ</td><td>267</td><td>12</td><td>202</td></tr>
<tr><td>ಚನ್ನಗಿರಿ</td><td>370</td><td>13</td><td>315</td></tr>
</table>
ನಿವೇಶನ ಹಾಗೂ ಅನುದಾನ ಲಭ್ಯತೆಗನುಗುಣವಾಗಿ ಹೊಸ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ.
</td>
</tr>
</table>

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 42 ಐಸಿಡಿ 2020

ಅನುಬಂಧ-1

ಪ್ರಶ್ನೆ ಸಂಖ್ಯೆ:315 ಶ್ರೀ ಆರ್ ಪ್ರಸನ್ನ ಕುಮಾರ

ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಹಾಗೂ ಇಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ (ಜಿಲ್ಲಾವಾರು ವಿವರ)

ಕ್ರ.ಸಂ	ಜಿಲ್ಲೆಯ ಹೆಸರು	ಅಂಗನವಾಡಿ ಕೇಂದ್ರಗಳ ಸಂಖ್ಯೆ	ಮಿನಿ ಅಂಗನವಾಡಿ ಕೇಂದ್ರಗಳ ಸಂಖ್ಯೆ	ಅಂಗನವಾಡಿ ಕೇಂದ್ರದಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ
1	ಬಾಗಲಕೋಟೆ	2164	57	73400
2	ಬೆಂಗಳೂರು(ಗ್ರಾ)	1108	121	21826
3	ರಾಮನಗರ	1301	242	21261
4	ಬೆ ಂಗಳೂರು(ನ)	2329	91	70406
5	ಬೆಳಗಾ ಂ	5235	59	170814
6	ಬಳ್ಳಾರಿ	2715	69	98722
7	ಬೀದರ್	1866	27	47751
8	ವಿಜಯಪುರ	2269	44	78399
9	ಚಾಮರಾಜನಗರ	1371	50	27137
10	ಚಿಕ್ಕಮಗಳೂರು	1667	158	24338
11	ಚಿತ್ರದುರ್ಗ	2208	116	60775
12	ಮಂಗಳೂರು	2084	20	43382
13	ದಾವಣಗೆರೆ	1656	65	46514
14	ಧಾರವಾಡ	1495	10	51847
15	ಗದಗ	1162	4	38677
16	ಕಲ್ಬುರ್ಗಿ	3025	73	83922
17	ಯಾದಗಿರಿ	1336	50	52604
18	ಹಾಸನ	2248	275	32904

19	ಹಾವೇರಿ	1891	27	58030
20	ಕೊಡಗು	848	23	9400
21	ಕೋಲಾರ	1980	81	36593
22	ಚಿಕ್ಕಬಳ್ಳಾಪುರ	1848	113	31171
23	ಕೊಪ್ಪಳ	1800	50	72498
24	ಮ ಂಡ್ಯ	2240	306	36965
25	ಮೈಸೂರು	2691	169	51014
26	ರಾಯಚೂರು	2621	41	92240
27	ಶಿವಮೊಗ್ಗ	2125	314	42260
28	ತುಮಕೂರು	3576	519	60641
29	ಉಡುಪಿ	1191	0	23621
30	ಉತ್ತರಕನ್ನಡ	2530	157	45494
	ರಾಜ್ಯದ ಒಟ್ಟು	**62580**	**3331**	**1604606**

ಅನುಬಂಧ-2

ಪ್ರಶ್ನೆ ಸಂಖ್ಯೆ:315 ಶ್ರೀ ಆರ್ ಪ್ರಸನ್ನ ಕುಮಾರ

ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಜಿಲ್ಲಾವಾರು ವಿವರ:

ಕ್ರ.ಸಂ	ಜಿಲ್ಲೆಯ ಹೆಸರು	ಅಂಗನವಾಡಿ ಕಾರ್ಯಕರ್ತೆಯರು	ಅಂಗನವಾಡಿ ಸಹಾಯಕಿಯರು
1	ಬಾಗಲಕೋಟೆ	2221	2164
2	ಬೆಂಗಳೂರು(ಗ್ರಾ)	1229	1108
3	ರಾಮನಗರ	1543	1301
4	ಬೆಂಗಳೂರು(ನ)	2420	2329
5	ಬೆಳಗಾ ೦	5294	5235
6	ಬಳ್ಳಾರಿ	2784	2715
7	ಬೀದರ್	1893	1866
8	ವಿಜಯಪುರ	2313	2269
9	ಚಾಮರಾಜನಗರ	1421	1371
10	ಚಿಕ್ಕಮಗಳೂರು	1825	1667
11	ಚಿತ್ರದುರ್ಗ	2324	2208
12	ಮಂಗಳೂರು	2104	2084
13	ದಾವಣಗೆರೆ	1721	1656
14	ಧಾರವಾಡ	1505	1495
15	ಗದಗ	1166	1162
16	ಕಲ್ಬುರ್ಗಿ	3098	3025

17	ಯಾದಗಿರಿ	1386	1336
18	ಹಾಸನ	2523	2248
19	ಹಾವೇರಿ	1918	1891
20	ಕೊಡಗು	871	848
21	ಕೋಲಾರ	2061	1980
22	ಚಿಕ್ಕಬಳ್ಳಾಪುರ	1961	1848
23	ಕೊಪ್ಪಳ	1850	1800
24	ಮ ಂಡ್ಯ	2546	2240
25	ಮೈಸೂರು	2860	2691
26	ರಾಯಚೂರು	2662	2621
27	ಶಿವಮೊಗ್ಗ	2439	2125
28	ತುಮಕೂರು	4095	3576
29	ಉಡುಪಿ	1191	1191
30	ಉತ್ತರಕನ್ನಡ	2687	2530
ರಾಜ್ಯದ ಒಟ್ಟು		65911	62580

ಅನುಬಂಧ–3

ಪ್ರಶ್ನೆ ಸಂಖ್ಯೆ:315 ಶ್ರೀ ಆರ್ ಪ್ರಸನ್ನ ಕುಮಾರ

ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು

ಕೇಂದ್ರ ಸರ್ಕಾರದಿಂದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೀಡಲಾಗುತ್ತಿರುವ ಸೌಲಭ್ಯಗಳು:

ಗೌರವಧನ:

ಹಾಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆಯರಿಗೆ ರೂ.4500/–, ಸಹಾಯಕಿಯರಿಗೆ ರೂ.2500/– ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.3500/– ಗೌರವಧನ ನೀಡುತ್ತಿದ್ದು, ಇದರಲ್ಲಿ 40% ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ.

ಸಮವಸ್ತ್ರ:

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ, ಕೇಂದ್ರ ಸರ್ಕಾರದ ವತಿಯಿಂದ ಒಂದು ಸಮವಸ್ತ್ರಕ್ಕೆ ರೂ.400/– ರಂತೆ ವಾರ್ಷಿಕ 2 ಸಮವಸ್ತ್ರಗಳನ್ನು ನೀಡಲಾಗುತ್ತಿದೆ.

ರಜೆ:

6 ತಿಂಗಳ ಗೌರವಧನ ಸಹಿತ ಹೆರಿಗೆ ರಜೆ ನೀಡಲಾಗುತ್ತಿದೆ ಹಾಗೂ ವಾರ್ಷಿಕ 20 ದಿನಗಳ ಸಾಂದರ್ಭಿಕ ರಜೆ ನೀಡುತ್ತಿದ್ದು, ಅನಾರೋಗ್ಯದ ಸಂದರ್ಭದಲ್ಲಿ 10 ದಿನಗಳ ರಜೆಯನ್ನು ಒಟ್ಟಿಗೆ ಉಪಯೋಗಿಸಬಹುದಾಗಿರುತ್ತದೆ

ಜನಶ್ರೀ ಭೀಮಾ ಯೊಜನೆ:

ಭಾರತ ಸರ್ಕಾರ ಮತ್ತು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಅಂಗನವಾಡಿ ಕಾರ್ಯಕರ್ತೆಯರು / ಸಹಾಯಕಿಯರಿಗೆ ಜನಶ್ರೀ ಬಿಮಾ ಯೋಜನೆಯನ್ನು ಜಾರಿಗೊಳಿಸಲಾದ್ದು, ಈ ಯೋಜನೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸ್ವ–ಇಚ್ಛೆಯಿಂದ ಸದಸ್ಯರಾಗುತ್ತಾರೆ.

ಈ ಯೋಜನೆಯಡಿ ಪ್ರತಿ ಫಲಾನುಭವಿಯ ವಾರ್ಷಿಕ ವಿಮಾ ವಂತಿಗೆ ರೂ.280 ಆಗಿದ್ದು, ಇದರಲ್ಲಿ ರೂ. 100/–ನ್ನು ಭಾರತ ಸರ್ಕಾರ ,ರೂ.100/–ನ್ನು ಭಾರತೀಯ ಜೀವ ವಿಮಾ ನಿಗಮದ ಸಾಮಾಜಿಕ ಭದ್ರತಾ ನಿಧಿಯಿಂದ ಮತ್ತು ರೂ.80/–ನ್ನು ಸಂಬಂಧ ಪಟ್ಟ ಕಾರ್ಯಕರ್ತೆ/ ಸಹಾಯಕಿಯರು ಭರಿಸಬೇಕಾಗಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ವಂತಿಗೆ ಇರುವುದಿಲ್ಲ.

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಕಟ್ಟಬೇಕಾಗಿದ್ದ ವಂತಿಗೆ ರೂ.80/–ನ್ನು ಕೇಂದ್ರ ಸರ್ಕಾರವು ಮನ್ನಾ ಮಾಡಿದ್ದು, ಈ ಯೋಜನೆಯಲ್ಲಿ, ಸದಸ್ಯರಾದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು

ಅ) ಸ್ವಾಭಾವಿಕ ಮರಣವಾದಲ್ಲಿ – ರೂ.30,000/–,
ಆ)ಅಪಘಾತದಿಂದ ಮರಣ/ಶಾಶ್ವತ ಅಂಗ ವೈಕಲ್ಯತೆ ಸಂಭವಿಸಿದಲ್ಲಿ – ರೂ.75,000/–
ಇ)ಅಂಶಿಕವಾಗಿ ಶಾಶ್ವತ ಅಂಗ ವೈಕಲ್ಯತೆ ಉಂಟಾದಲ್ಲಿ – ರೂ.37,500/–

ಪರಿಹಾರ ನೀಡಲಾಗುತ್ತದೆ.

ಸದಸ್ಯರಾದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಮಕ್ಕಳು 9 ರಿಂದ 12 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ತ್ರೈಮಾಸಿಕ ರೂ.300/– ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ (ವಿದ್ಯಾರ್ಥಿಯು ಅನುತ್ತೀರ್ಣರಾದಲ್ಲಿ ವಿದ್ಯಾರ್ಥಿ ವೇತನ ನೀಡಲಾಗುವುದಿಲ್ಲ).

ಪೂರಕ ಪೌಷ್ಠಿಕ ಆಹಾರ:

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಫಲಾನುಭವಿಗಳೆಂದು ಪರಿಗಣಿಸಿ ದಿನಕ್ಕೆ ರೂ.9.50/– ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ತಿಂಗಳಲ್ಲಿ 25 ದಿನ ನೀಡಲಾಗುತ್ತಿದೆ.

ರಾಜ್ಯ ಸರ್ಕಾರದಿಂದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೀಡಲಾಗುತ್ತಿರುವ ಸೌಲಭ್ಯಗಳು

ಹೆಚ್ಚುವರಿ ಗೌರವಧನ:

ಮಾಹೆಯಾನ ಕಾರ್ಯಕರ್ತೆಯರಿಗೆ ರೂ.5500/–, ಸಹಾಯಕಿಯರಿಗೆ ರೂ.2750/– ಮತ್ತು ಮಿನಿ ಅಂಗನವಾಡಿ ಕಾರ್ಯಕತೆಯರಿಗೆ ರೂ.2750/– ಹೆಚ್ಚುವರಿ ಗೌರವಧನವನ್ನು ಪಾವತಿಸಲಾಗುತ್ತಿದೆ.

ರಜೆ:

ಮೇ ಮಾಹೆಯಲ್ಲಿ 15 ದಿನಗಳ ಬೇಸಿಗೆ ರಜೆ ನೀಡಲಾಗುತ್ತಿದೆ.

ಮರಣ ಪರಿಹಾರ:

ಸೇವೆಯಲ್ಲಿರುವಾಗಲೇ ಮರಣ ಹೊಂದುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ವಾರಸುದಾರರಿಗೆ ರೂ.50,000/– ಗಳ ಮರಣ ಪರಿಹಾರವನ್ನು ನೀಡಲಾಗುತ್ತದೆ.

ವೈದ್ಯಕೀಯ ವೆಚ್ಚ ಮರುಪಾವತಿ:

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಸೇವೆಯಲ್ಲಿರುವಾಗ ತೀವ್ರತರವಾದ ಖಾಯಿಲೆಗಳಿಗೆ ಗುರಿಯಾಗಿ ಚಿಕಿತ್ಸೆಗೊಳಗಾದ ಸಂದರ್ಭದಲ್ಲಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ರೂ.50,000/- ಗಳ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ ನೀಡಲಾಗುತ್ತಿದೆ.

ಅಂತ್ಯಕ್ರಿಯೆಗಾಗಿ ವೆಚ್ಚ:

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಸೇವೆಯಲ್ಲಿರುವ ಮರಣ ಹೊಂದಿದಾಗ ಅವರ ಅಂತ್ಯಕ್ರಿಯೆಗಾಗಿ ಮರಣ ಪರಿಹಾರದಲ್ಲಿ ಮುಂಗಡವಾಗಿ ರೂ.5,000 /- ನೀಡಲಾಗುತ್ತಿದೆ.

ಎನ್.ಪಿ.ಎಸ್.ಲೈಟ್ ಪಿಂಚಣಿ ಯೋಜನೆ:

ರಾಜ್ಯದಲ್ಲಿ ಎನ್.ಪಿ.ಎಸ್. ಯೋಜನೆಯಡಿ ನೋಂದಣಿಯಾಗಿರುವಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ವಂತಿಗೆ ಆಧಾರಿತ ನಿವೃತ್ತಿ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ನಿಗಧಿಗೊಳಿಸಿದ್ದು ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರು ಸ್ವೀಕರಿಸುವ ಗೌರವಧನದಲ್ಲಿ ಅನುಕ್ರಮವಾಗಿ ರೂ.150/- ಮತ್ತು ರೂ.84/- ಅವರ ವಂತಿಗೆಯಾಗಿ ಭರಿಸುತ್ತಿದ್ದು, ಸಮಪಾಲು ವಂತಿಗೆಯನ್ನು ರಾಜ್ಯ ಸರ್ಕಾರವು ಭರಿಸುತ್ತಿದೆ.

ಅನುಕಂಪದ ಆಧಾರದಲ್ಲಿ ನೇಮಕ:

ಸೇವೆಯಲ್ಲಿರುವಾಗಲೇ ಮರಣಹೊಂದುವ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಮಗಳಿಗೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಸ್ಥಳೀಯವಾಗಿ ವಾಸ ಇತ್ಯಾದಿ ಆಯ್ಕೆ ಮಾರ್ಗಸೂಚಿಯನ್ವಯ ಎಲ್ಲಾ ಷರತ್ತುಗಳನ್ನು ಪೂರೈಸಿದಲ್ಲಿ ಮೃತ ತಾಯಿಯು ನಿರ್ವಹಿಸುತ್ತಿದ್ದ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕ ಮಾಡಲಾಗುತ್ತದೆ.

ಮಾತೃಪೂರ್ಣ ಯೋಜನೆ:

ಗರ್ಭಿಣಿ / ಬಾಣಂತಿ/ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಫಲಾನುಭವಿಗಳೆಂದು ಪರಿಗಣಿಸಿ ದಿನಕ್ಕೆ ರೂ.11.50/- ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ಬಿಸಿಯೂಟದೊಂದಿಗೆ ತಿಂಗಳಲ್ಲಿ 25 ದಿನ ನೀಡಲಾಗುತ್ತಿದೆ.